# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ::ಮೈಸೂರು ನಗರ ಸಾರಿಗೆ ವಿಭಾಗ::ಮೈಸೂರು

ಸಂ/ಕರಾಸಾ/ಮೈನಸಾವಿ/ಸಂ/ವಾ/ 1686 /16-17 ದಿನಾಂಕ: 08 /12/2016

## ಸಂಧಾನ ಪ್ರಕಟಣೆ ಸಂಖ್ಯೆ: 08/2016

***

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಮೈಸೂರು ನಗರ ಸಾರಿಗೆ ವಿಭಾಗಕ್ಕೆ ಸೇರಿದ ಮೈಸೂರು ನಗರ ಬಸ್ ನಿಲ್ದಾಣದಲ್ಲಿನ ವಾಣಿಜ್ಯ ಸ್ಥಳಗಳಾದ ಶಾಶ್ವತ ಮಳಿಗೆ, ಕೊಠಡಿ ಮತ್ತು ತೆರೆದ ಸ್ಥಳಗಳಲ್ಲಿ "ಜನರಲ್ ಸ್ಟಾಲ್" (ವ್ಯಾಪಾರ/ಕಛೇರಿ) ನಡೆಸಲು ಹಾಗೂ ಚಾಮುಂಡಿ ಬೆಟ್ಟದ ಬಸ್ ನಿಲ್ದಾಣದಲ್ಲಿರುವ ಉಪಹಾರ ಗೃಹವನ್ನು ಪರವಾನಗಿ ಆಧಾರದ ಮೇಲೆ ಪರವಾನಗಿದಾರರನ್ನು ಆಯ್ಕೆ ಮಾಡುವ ಸಲುವಾಗಿ ಈ ಸಂಧಾನ ಪ್ರಕಟಣೆಯನ್ನು ಹೊರಡಿಸಲಾಗಿದೆ. ಶಾಶ್ವತ ಮಳಿಗೆ ಮತ್ತು ಕೊಠಡಿಗಳನ್ನು ಐದು (05) ವರ್ಷಗಳ ಅವಧಿಗೆ ಮತ್ತು ತೆರೆದ ಸ್ಥಳಗಳಿಗೆ ಮೂರು (3) ವರ್ಷಗಳ ಅವಧಿಗೆ "ಎಲ್ಲಿದೆಯೋ ಹಾಗು ಯಾವ ಸ್ಥಿತಿಯಲ್ಲಿವೆಯೋ ಹಾಗೆಯೇ" ಆಧಾರದ ಮೇಲೆ ಪರವಾನಗಿಯನ್ನು ಸಂಧಾನದ ಮುಖಾಂತರ ನೀಡಲಾಗುವುದು.

### ಸಂಧಾನಕ್ಕೆ ಒಳಪಡುವ ಮಳಿಗೆ/ಕೊಠಡಿ/ತೆರದ ಸ್ಥಳದ ವಿವರ

| ಕ್ರ. ಸಂ. | ಮಳಿಗೆ/ಕೊಠಡಿಗಳ ವಿವರ | ವಿಸ್ತೀರ್ಣ (ಚ.ಅಡಿ) | ಮಾಸಿಕ ಲೈಸೆನ್ಸ್ ಶುಲ್ಕ ರೂ. | ಇ.ಎಂ.ಡಿ. ಮೊತ್ತ. ರೂಗಳಲ್ಲಿ | ನಿಗಧಿಪಡಿಸಿದ ವ್ಯವಹಾರ | ಅರ್ಜಿ ಶುಲ್ಕ. ರೂಗಳಲ್ಲಿ |
|---|---|---|---|---|---|---|
| 1 | ಕೊಠಡಿ ಸಂ. 04,1ನೇ ಮಹಡಿ, ನ.ಬ.ನಿ. ಮೈಸೂರು. | 158.00 | 3,905/- | 11,715/- | ಜನರಲ್‌ಸ್ಟಾಲ್ / ಕಛೇರಿ | 100/- |
| 2 | **ಕೊಠಡಿ ಸಂ.** 15, 2ನೇ ಮಹಡಿ, ನ.ಬ.ನಿ, ಮೈಸೂರು. | 167.00 | 4,070/- | 12,210/- | ಜನರಲ್ ಸ್ಟಾಲ್/ ಕಛೇರಿ | 100/- |
| | **ಸುತ್ತೋಲೆ ಸಂಖ್ಯೆ 821 ರ ಅನುಸಾರ ಸಂಧಾನಕ್ಕೆ ಒಳಪಡುವ ಮಳಿಗೆ/ತೆರೆದ ಸ್ಥಳ/ಕೊಠಡಿ** | | | | | |
| 3 | **ಮಳಿಗೆ ಸಂ. 05.** (ಕೆ.ಆರ್.ವೃತ್ತಕ್ಕೆ ಮುಖ ಮಾಡಿ ನಿರ್ಮಿಸಿದೆ.)ನ.ಬ.ನಿ. | 256.00 | 1,08,570/- | 2,71,425 | ಜನರಲ್ ಸ್ಟಾಲ್ | 100/- |
| 4 | **ಅಂಕಣ ಸಂಖ್ಯೆ:07 (6ಎ)ತೆರೆದ ಸ್ಥಳ**,ನ.ಬ.ನಿ. ಮೈಸೂರು. | 49.00 | 37,950/- | 94,875/- | ಮಿಲ್ಕ್ ಪಾರ್ಲರ್ | 100/- |
| 5 | **ತೆರದ ಸ್ಥಳ ಸಂಖ್ಯೆ: 08** (ಕುಡಿಯುವ ನೀರಿನ ಟ್ಯಾಂಕ್ ಎಡ ಬದಿ ಹಿಂಭಾಗ, ನ.ಬ.ನಿ) | 115.00 | 34,208/- | 85,520/- | ಜನರಲ್ ಸ್ಟಾಲ್ | 100/- |
| 6 | **ನಾರ್ತ್ ಈಸ್ಟ್ ಕಾರ್ನರ್ ತೆರದ ಸ್ಥಳ ಸಂಖ್ಯೆ:03**.ನ.ಬ.ನಿ. | 100.00 | 22,000 | 55,000/- | ಜನರಲ್‌ಸ್ಟಾಲ್ | 100/- |
| 7 | **ಕೊಠಡಿ ಸಂ. 04,** 2ನೇ ಮಹಡಿ, ನ.ಬ.ನಿ. ಮೈಸೂರು. | 230.00 | 4,760/- | 11,900/- | ಜನರಲ್‌ಸ್ಟಾಲ್/ ಕಛೇರಿ | 100/- |
| 8 | **ಕೊಠಡಿ ಸಂ. 05,** 01ನೇ ಮಹಡಿ, ನ.ಬ.ನಿ, ಮೈಸೂರು. | 65.00 | 2,130/- | 5,325/- | ಜನರಲ್‌ಸ್ಟಾಲ್/ ಕಛೇರಿ | 100/- |
| 9 | **ಕೊಠಡಿ ಸಂ. 06,** 2ನೇ ಮಹಡಿ, ನ.ಬ.ನಿ, ಮೈಸೂರು. | 198.10 | 3,905/- | 9,763/- | ಜನರಲ್ ಸ್ಟಾಲ್/ ಕಛೇರಿ | 100/- |
| 10 | **ಕೊಠಡಿ ಸಂ. 21,** 2ನೇ ಮಹಡಿ, ನ.ಬ.ನಿ, ಮೈಸೂರು. | 103.00 | 1,967/- | 4,918/- | ಜನರಲ್ ಸ್ಟಾಲ್/ ಕಛೇರಿ | 100/- |
| 11 | **ಉಪಹಾರ ಗೃಹ, ಚಾಮುಂಡಿ ಬೆಟ್ಟ ಬಸ್ ನಿಲ್ದಾಣ,** ಚಾಮುಂಡಿ ಬೆಟ್ಟ. ಮೈಸೂರು. | 1483.00 | 18,173/- | 45,433/- | ಉಪಹಾರಗೃಹ | 100/- |

ಸಂಧಾನಕ್ಕೆ ಒಳಪಡುವ ಈ ಮೇಲ್ಕಂಡ ಕೊಠಡಿ, ಮಳಿಗೆಗಳಿಗೆ ಪರವಾನಗಿದಾರರನ್ನು ಆಯ್ಕೆ ಮಾಡಲು ಹೊರಡಿಸಿರುವ ಪ್ರಕಟಣೆಯಂತೆ, ಸಂಧಾನದಲ್ಲಿ ಭಾಗವಹಿಸಲು ಇಚ್ಚಿಸುವ ಅರ್ಜಿದಾರರು ಅರ್ಜಿಯನ್ನು ಮತ್ತು ಷರತ್ತು ಹಾಗೂ ನಿಬಂಧನೆಗಳನ್ನು ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಯವರ ಕಛೇರಿಯಲ್ಲಿ ದಿನಾಂಕ:10/12/2016 ರಿಂದ 30/12/2016 ರವರೆಗೆ ಕಛೇರಿಯ ಕೆಲಸದ ವೇಳೆಯಲ್ಲಿ ಸಂಧಾನದ ಅರ್ಜಿಗಳಿಗೆ ನಿಗಧಿಪಡಿಸಿರುವ ಅರ್ಜಿ ಶುಲ್ಕದ ಮೊತ್ತಕ್ಕೆ ಯಾವುದೇ ರಾಷ್ಟ್ರೀಕೃತ ಬ್ಯಾಂಕಿನಿಂದ ವಿಭಾಗೀಯ ನಿಯಂತ್ರಣಾಧಿಕಾರಿ, ಕ.ರಾ.ರ.ಸಾ.ನಿಗಮ,ಮೈಸೂರು ನಗರ ಸಾರಿಗೆ ವಿಭಾಗ, (Divisional controller KSRTC MCTD Mysore) ಮೈಸೂರು ರವರ ಹೆಸರಿನಲ್ಲಿ ಪಡೆದ ಪ್ರತ್ಯೇಕ ಡಿ.ಡಿ.ಗಳನ್ನು ಸಲ್ಲಿಸಿ ಪಡೆಯಬಹುದಾಗಿರುತ್ತದೆ.

ಸಂಧಾನಕ್ಕೆ ಒಳಪಡುವ ಮಳಿಗೆ ಮತ್ತು ಕೊಠಡಿಗಳಿಗೆ ಪರವಾನಗಿದಾರರನ್ನು ಆಯ್ಕೆ ಮಾಡಲು ಸಂಧಾನವನ್ನು ದಿನಾಂಕ: 03/01/2017 ರಂದು ಬೆಳಿಗ್ಗೆ 11-00 ಘಂಟೆಗೆ ವಿಭಾಗೀಯ ಕಛೇರಿ, ಕ.ರಾ.ರ.ಸಾ.ನಿಗಮ, ಬನ್ನಿಮಂಟಪ, ಮೈಸೂರು-15 ರಲ್ಲಿ ಅಧ್ಯಕ್ಷರು ಹಾಗೂ ಸದಸ್ಯರ ಸಮ್ಮುಖದಲ್ಲಿ ನಡೆಸಲಾಗುವುದು. ಸದರಿ ಕೊಠಡಿ/ಮಳಿಗೆಗಳಿಗೆ ಸಂಧಾನದಲ್ಲಿ ಭಾಗವಹಿಸಲು ಇಚ್ಚಿಸುವವರು ನಿಗಮವು ನಿಗಧಿಪಡಿಸಿದ **ಇ.ಎಂ.ಡಿ.** ಮೊತ್ತಕ್ಕೆ ವಿಭಾಗೀಯ ನಿಯಂತ್ರಣಾಧಿಕಾರಿ, ಕ.ರಾ.ರ.ಸಾ.ನಿಗಮ, ಮೈಸೂರು ನಗರ ಸಾರಿಗೆ ವಿಭಾಗ, ಮೈಸೂರು ರವರ (Divisional controller KSRTC MCTD Mysore) ಹೆಸರಿನಲ್ಲಿ ಡಿ.ಡಿ.ಯನ್ನು ಪಡೆದು ಸ್ವಹಸ್ತಾಕ್ಷರದಲ್ಲಿ ಬರೆದ ಮನವಿ ಪತ್ರವನ್ನು ಸಲ್ಲಿಸಿ ಸಂಧಾನದಲ್ಲಿ ಭಾಗವಹಿಸಿ ನಿಯಮಾವಳಿಗಳನ್ನು ಪಾಲಿಸಿ ನಿಯಮಾನುಸಾರ ಪರವಾನಗಿದಾರರಾಗಿ

ಆಯ್ಕೆಯಾಗಬಹುದಾಗಿದೆ. ನಿಗಮದಲ್ಲಿ ಚಾಲ್ತಿಯಲ್ಲಿರುವ ನಿಯಮ ಮತ್ತು ನಿಬಂಧನೆಗಳ ಬಗ್ಗೆ ವಿಭಾಗೀಯ ಕಛೇರಿಯನ್ನು ಸಂಧಾನಕ್ಕೆ ಮೊದಲು ಸಂಪರ್ಕಿಸಿ ಮಾಹಿತಿಯನ್ನು ಪಡೆದು ಭಾಗವಹಿಸುವುದು ಅರ್ಜಿದಾರರ ಹೊಣೆಯಾಗಿರುತ್ತದೆ.

ಈ ಸಂಧಾನ ಪ್ರಕಟಣೆಯನ್ನು ಯಾವುದೇ ಕಾರಣ ನೀಡದೇ ಪುರಸ್ಕರಿಸುವ, ತಿರಸ್ಕರಿಸುವ, ಮಾರ್ಪಾಡು ಮಾಡುವ ಹಾಗೂ ರದ್ದುಪಡಿಸುವ ಹಕ್ಕನ್ನು ನಿಗಮವು ಕಾಯ್ದಿರಿಸಿಕೊಂಡಿದೆ.

ಸಹಿ/-
ವಿಭಾಗೀಯ ನಿಯಂತ್ರಣಾಧಿಕಾರಿ,
ಮೈಸೂರು ನಗರ ಸಾರಿಗೆ ವಿಭಾಗ

ಪ್ರತಿಯನ್ನು ಗೌರವ ಪೂರ್ವಕವಾಗಿ:-ನಿರ್ದೇಶಕರು(ಭ. & ಜಾ), ಕ.ರಾ.ರ.ಸಾ.ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.

ಪ್ರತಿಯನ್ನು ಗೌರವ ಪೂರ್ವಕವಾಗಿ:- ಮುಖ್ಯ ಸಂಚಾರ ವ್ಯವಸ್ಥಾಪಕರು(ವಾ) ಕ.ರಾ.ರ.ಸಾ.ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ

ಪ್ರತಿಯನ್ನು:-ಎಲ್ಲಾ ವಿಭಾಗೀಯ ನಿಯಂತ್ರಣಾಧಿಕಾರಿಗಳು, ಕ.ರಾ.ರ.ಸಾ.ನಿಗಮ, ರವರ ಮಾಹಿತಿಗಾಗಿ ರವಾನಿಸಲಾಗಿದೆ.

ಪ್ರತಿಯನ್ನು:-ಎಲ್ಲಾ ಶಾಖಾ ಮುಖ್ಯಸ್ಥರು/ಘಟಕ ವ್ಯವಸ್ಥಾಪಕರು, ನಿಲ್ದಾಣ ಮೇಲ್ವಿಚಾರಕರು, ಕ.ರಾ.ರ.ಸಾ.ನಿಗಮ, ಮೈಸೂರು ನಗರ ವಿಭಾಗ, ಮೈಸೂರು ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ರವಾನಿಸಲಾಗಿದೆ.

ಪ್ರತಿಯನ್ನು:-ಭಧ್ರತಾ&ಜಾಗೃತಾಧಿಕಾರಿ, ಲೆಕ್ಕಾಧಿಕಾರಿ, ಸ.ಕಾ.ನಿ.ಅಭಿಯಂತರರು, ಕ.ರಾ.ರ.ಸಾ.ನಿಗಮ, ಮೈಸೂರು ನಗರ ವಿಭಾಗ, ಮೈಸೂರು ರವರ ಮಾಹಿತಿಗಾಗಿ ಹಾಗೂ ದಿನಾಂಕ: 03/01/2017 ರಂದು ನಡೆಯುವ ಸಂಧಾನದಲ್ಲಿ ಭಾಗವಹಿಸಲು ತಿಳಿಸಿದೆ.

ಪ್ರತಿಯನ್ನು:-ನಿಲ್ದಾಣ ಮೇಲ್ವಿಚಾರಕರು, ನಗರ ಸಾರಿಗೆ ಬಸ್ ನಿಲ್ದಾಣ, ಕ.ರಾ.ರ.ಸಾ.ನಿಗಮ, ಮೈಸೂರು, ರವರ ಮಾಹಿತಿಗಾಗಿ ಹಾಗೂ ಟೆಂಡರ್ ಪ್ರಕಟಣೆಯ ಪ್ರತಿಯನ್ನು ಸಾರ್ವಜನಿಕರ ವೀಕ್ಷಣೆಗೆ ಅನುಗುಣವಾಗುವಂತೆ ಪ್ರದರ್ಶಿಸಲು ಕ್ರಮ ಕೈಗೊಳ್ಳುವುದು. ಅಲ್ಲದೆ ನಿಲ್ದಾಣದಲ್ಲಿ ಮಳಿಗೆ/ಕೊಠಡಿ ಹಾಗೂ ತೆರೆದ ಸ್ಥಳದಲ್ಲಿ ಗುರುತಿಸಿರುವ ಮಳಿಗೆಗಳ ಬಗ್ಗೆ ಸಾರ್ವಜನಿಕರಿಗೆ ಸ್ಪಷ್ಟ ಮಾಹಿತಿಯನ್ನು ಯಾವುದೇ ದೂರಿಗೆ ಆಸ್ಪದ ನೀಡದಂತೆ ಒದಗಿಸುವುದು.

ಸಹಿ/-
ವಿಭಾಗೀಯ ನಿಯಂತ್ರಣಾಧಿಕಾರಿ,
ಮೈಸೂರು ನಗರ ಸಾರಿಗೆ ವಿಭಾಗ